### ಕಂಗ್ರಾಟ್ಸ್ ಚಂದನವನ

ಕೊನೆಗೂ ಶ್ರುತಿ ಹರಿಹರನ್ ಅವರಿಗೆ ಅರ್ಹ ಗೌರವ ಸಮ್ಮಾನ ದೊರೆತಿರುವುದು ಅವರಿಗೆ ಮಾತ್ರವಲ್ಲ, ಎಲ್ಲರಿಗೂ ಸಂತಸದ ವಿಚಾರ. ಅವರದ್ದು ಸಾಟಿಯಿಲ್ಲದ ಪ್ರತಿಭೆ. ಯಾರನ್ನೇ ಆಗಲಿ ಅವಕಾಶ ವಂಚಿತರನ್ನಾಗಿಸಿ ಮೂಲೆಗುಂಪು ಮಾಡುವ ಪ್ರಯತ್ನಗಳು ಹೆಚ್ಚು ಕಾಲ ಬಾಳುವುದಿಲ್ಲ. ಅವರ ಪ್ರತಿಭೆ ಇನ್ನಷ್ಟು ಬೆಳಗುತ್ತದೆ.



—ಎಚ್ ಸಿದ್ದಾರ್ಥ ಹೆಬ್ಬಾರ್, ಕಾರ್ಕಳ

### ಎಸ್‌ಜೆಪಿಗೆ 75

ಎಸ್.ಜೆ.ಪಿ.ಗೆ 75 ವರ್ಷ ತುಂಬಿದ ಸಂದರ್ಭದಲ್ಲಿ ಸುಧಾ ಆಗಸ್ಟ್ 29ರ ಸಂಚಿಕೆಯಲ್ಲಿ ಪ್ರಕಟಿಸಿದ ಲೇಖನವನ್ನು ಓದಿ ಸಂತೋಷವಾಯಿತು. ನಾನೂ ಸಹ ಎಸ್.ಜೆ.ಪಿ. ಹಳೆಯ ವಿದ್ಯಾರ್ಥಿ.

ಸರ್ ಎಂ. ವಿಶ್ವೇಶ್ವರಯ್ಯನವರು ಈ ಸಂಸ್ಥೆಯನ್ನು ಸ್ಥಾಪಿಸಿದಾಗ ಅದರ ಹೆಸರು 'ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಶನಲ್ ಇನ್‌ಸ್ಟಿಟ್ಯೂಟ್' ಎಂದು ಇತ್ತು. (ಎಸ್.ಜೆ.ಓ.ಐ.) 1957ರಲ್ಲಿ ಆಗಿನ ಮೈಸೂರು ಸರ್ಕಾರ ಸರ್ ಎಂ. ವಿ. ಅವರೊಂದಿಗೆ ಸಮಾಲೋಚಿಸದೆ ಹೆಸರನ್ನು ಎಸ್.ಜೆ.ಪಿ. ಎಂದು ಬದಲಾಯಿಸಿದಾಗ ಸರ್ ಎಂ. ವಿ. ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದರು.

—ಎಂ. ಜಿ. ವೆಂಕಟೇಶಮೂರ್ತಿ, ಬೆಂಗಳೂರು

### ಅರಿವು ಮೂಡಿಸುವ ಬರಹಗಳು

ಆಗಸ್ಟ್ 15ರ ಸಂಚಿಕೆಯಲ್ಲಿನ 'ಸ್ವಾತಂತ್ರ್ಯ 3ಡಿ ನೋಟ' ಲೇಖನಗಳು ಅತ್ಯುತ್ತಮವಾಗಿದೆ. ಈ ಬರಹಗಳು ಓದುಗರಲ್ಲಿ ಅಗಾಧ ಅರಿವನ್ನು ಮೂಡಿಸುವಂತಿವೆ. ಈ ಬರಹಗಳನ್ನು ಬರೆದ ಕಾವ್ಯಾ ಕಡಮೆ ನಾಗರಕಟ್ಟೆ, ವಿಲ್ಸನ್ ಕಟೀಲ್, ರೂಪಾ ಹಾಸನ್ ಅವರಿಗೆ ಧನ್ಯವಾದಗಳು. ಇನ್ನಷ್ಟು ಚಿಂತನ ಪ್ರಚೋದಕ ಬರಹ ಬರೆಯುವಂತೆ ದೇವರು ಅವರನ್ನು ಆಶೀರ್ವದಿಸಲಿ. ಸುಧಾ ಪತ್ರಿಕೆಗೂ ಥಾಂಕ್ಸ್.

—ಕರ್ನಲ್ ಸದಾನಂದ ಶಂಕರ್ ನಾಯಕ್

### ಫೋಟೊಗ್ರಫಿ ಟಿಪ್ಸ್‌ಗಳು

ಆಗಸ್ಟ್ 22ರ ಸಂಚಿಕೆಯಲ್ಲಿ ಫೋಟೊಗ್ರಫಿ ಕುರಿತ ಲೇಖನಗಳಲ್ಲಿ ಡಿ.ಎಂ. ಘನಶ್ಯಾಮ ಮತ್ತು ಶಿವು ಕೆ. ಅವರು ಫೋಟೊ ತೆಗೆಯುವ ಬಗ್ಗೆ ಹಾಗೂ ಮೊಬೈಲ್‌ಗೆ ಕ್ಯಾಮೆರಾ ಬಂದ ಬಗ್ಗೆ ವಿವರವಾಗಿ ತಿಳಿಸಿದ್ದಾರೆ. ಧನ್ಯವಾದಗಳು.

—ವಿಜಯಕುಮಾರ್ ಎಚ್. ಬಾಗಲಕೋಟೆ,

### ಕೂರಿಗೆ ಅಲ್ಲ, 'ತಲವು'

ಆಗಸ್ಟ್ 22ರ ಸಂಚಿಕೆಯ 'ನಿಮ್ಮ ಪುಟ'ದಲ್ಲಿ 'ಹಳೆಕಾಲದ ಕೂರಿಗೆ' ಎಂಬ ಹೆಸರಲ್ಲಿ ಪ್ರಕಟವಾದ ಚಿತ್ರ ಕೂರಿಗೆಯದಲ್ಲ. ಅದು 'ತಲವು'. ಕೂರಿಗೆಗೆ ಮೂರು ತಾಳುಗಳಿರುತ್ತವೆ. ತಾಳುಗಳ ಮೇಲೆ ಮೂರು ಬಿದಿರಿನ ಕೋಲುಗಳನ್ನು ಜೋಡಿಸಿ 'ತಲವು' ಅನ್ನು ಮೇಲೆ ಬಿಗಿಯಲಾಗುತ್ತದೆ. ಅದರಲ್ಲಿ ಬೀಜ ಹಾಕಿ ಬಿತ್ತನೆ ಕಾರ್ಯ ಪ್ರಾರಂಭವಾಗುತ್ತದೆ.

—ಬಸವರಾಜ ಹೂಗಾರ, ಇಳಕಲ್

## ಕಾಶ್ಮೀರದ ಭಿನ್ನ ನೋಟಗಳು

ಆಗಸ್ಟ್ 22ರ ಸಂಚಿಕೆಯಲ್ಲಿನ ಮುಖಪುಟ ಲೇಖನ 'ಕಾಡುತಾದ ಕಾಶ್ಮೀರ' (ಕೋಡಿಬೆಟ್ಟು ರಾಜಲಕ್ಷ್ಮಿ) ಲೇಖನ ಓದಿ ಮನಸ್ಸು ಹತ್ತು ವರ್ಷಗಳ ಹಿಂದಕ್ಕೆ ಓಡಿತು. ಆಗ ನಾನು ನನ್ನ ಪತ್ನಿ ಮತ್ತು ಮಗಳೊಂದಿಗೆ ಕಾಶ್ಮೀರಕ್ಕೆ ಭೇಟಿ ನೀಡಿದ್ದೆ! ಅಲ್ಲಿನ ತೇಲುವ ಪೇಟೆಯಲ್ಲಿ ಬಹಳಷ್ಟು ಖರೀದಿ ಮಾಡಿದ್ದೆವು. ಆಮೇಲೆ ಅನಿಸಿದ್ದು ನಮ್ಮ ಬೆಂಗಳೂರಿನಲ್ಲಿಯೇ ಅವುಗಳೆಲ್ಲ ಕಡಿಮೆ ಬೆಲೆಗೆ ಪಡೆಯಬಹುದಿತ್ತು ಎಂದು. ಒಂದು ಮಾತು ಮಾತ್ರ ಸತ್ಯ. ಅಲ್ಲಿನ ಬಹುತೇಕ ಮಂದಿ ಕಾಶ್ಮೀರ ಭಾರತದ ಜೊತೆ ಸೇರುವುದನ್ನು ವಿರೋಧಿಸುತ್ತಿದ್ದಾರೆ ಎಂದು ಅವರ ಮಾತುಗಳಲ್ಲಿ ವೇದ್ಯವಾಗುತ್ತಿತ್ತು!

ಲೇಖಕಿ ಬರೆದಿರುವಂತೆ 9 ವರ್ಷದ ಹಿಂದೆಯೇ ಕಾಶ್ಮೀರದ ಪರಿಸ್ಥಿತಿ ಆಗಿದ್ದರೆ, ಈಗಿನ ಪರಿಸ್ಥಿತಿ ಊಹಿಸಲು ಅಸಾಧ್ಯ. ತಂಪು ಹಿಮದ ಕಣಿವೆಯಲ್ಲಿ ಬದುಕುವವರ ಪರಿಸ್ಥಿತಿ ದ್ವೇಷ, ಮತಿಹೀನ ದಳ್ಳುರಿಯಿಂದ ದಹಿಸುತ್ತಿರುವುದು ವಿಪರ್ಯಾಸ.

—ಕುಮಾರ ಚಲವಾದಿ ಹಾಸನ, ದೆಗ್ಗನಹಳ್ಳಿ ಆನಂದ್ ಕೆ. ಆರ್. ನಗರ

ಆಗಸ್ಟ್ 22ರ ಸಂಚಿಕೆಯಲ್ಲಿ ಸೂರ್ಯಪ್ರಕಾಶ ಪಂಡಿತ ಅವರು ಬರೆದಿರುವ 'ಕಾಶ್ಮೀರ ಭಾರತದ ಶಾರದಾಪೀಠ' ಲೇಖನ ಭಾರತೀಯ ವಿದ್ವತ್‌ಪರಂಪರೆಗೆ ಕಾಶ್ಮೀರದ ಕೊಡುಗೆಯನ್ನು ಸೊಗಸಾಗಿ ಪರಿಚಯಿಸಿತು. ಭಾರತೀಯತೆಯನ್ನು ಮನಸ್ಸಲ್ಲಿ ತುಂಬಿಕೊಂಡವರಿಗೆ ಕಾಶ್ಮೀರ ಬರೀ ಭೌಗೋಳಿಕ ಪ್ರದೇಶ ಮಾತ್ರವಲ್ಲ, ಅದೊಂದು ಪರಂಪರೆಯ ದಾರಿ ಎಂಬ ಅರಿವನ್ನು ಮೂಡಿಸಿತು.

—ಶಿವಶಂಕರ್ ಎಸ್. ಕೋಲಾರ, ಎಚ್. ಆನಂದಕುಮಾರ್ ಚಿತ್ರದುರ್ಗ, ಟಿ. ಎಂ. ಮಾನಪ್ಪ ಶಿವಮೊಗ್ಗ

### ಬಾಡಿಗೆ ಮನೆ ಸ್ವಂತವೇ!

ಆಗಸ್ಟ್ 22ರ ಸಂಚಿಕೆಯಲ್ಲಿ ಪ್ರಕಟವಾದ ಸಂಪತ್ ಸಿರಿಮನೆ ಅವರ ಪ್ರಬಂಧ 'ಬಾಡಿಗೆ ಮನೆ' ಆಕರ್ಷಕವಾಗಿತ್ತು.

ಪ್ರಸ್ತುತ ಸಮಾಜದಲ್ಲಿ ಬಹುತೇಕರು ಅನುಭವಿಸುವ ಸಂಗತಿಗಳನ್ನೇ ಅವರು ಅಕ್ಷರರೂಪದಲ್ಲಿ ಬರೆದಿದ್ದಾರೆ. ಬಾಡಿಗೆ ಮನೆ, ನಾವು ವಾಸವಿರುವವರೆಗೂ ಸ್ವಂತ ಮನೆಯೇ.

—ವಿ. ಹೇಮಂತ್ ಕುಮಾರ್, ಬೆಂಗಳೂರು

### ದತ್ತಣ್ಣನ ಸಂದರ್ಶನ

ಆಗಸ್ಟ್ 15ರ ಸಂಚಿಕೆಯಲ್ಲಿ ಪ್ರಕಟವಾದ ನಟ ದತ್ತಣ್ಣ ಅವರ ಸಂದರ್ಶನ ಚೆನ್ನಾಗಿತ್ತು. ಗೌರ್ನಮೆಂಟ್ ಹೈಸ್ಕೂಲಿನಲ್ಲಿ ಅವರ ಜೊತೆ ಆಟವಾಡಿದ್ದು, 1958ರಲ್ಲಿ ಮೈಸೂರು ರಾಜ್ಯದ ಎಸ್‌ಎಸ್‌ಎಲ್‌ಸಿ ಪ್ರಥಮ ರ‍್ಯಾಂಕ್ ಪಡೆದಾಗ ಅವರ ಶೀಲ್ಡ್ ಹಿಡಿದು ಬಾಜಾ ಭಜಂತ್ರಿ ಬಾರಿಸುತ್ತ ದುರ್ಗದ ರಾಜಬೀದಿಯಲ್ಲಿ ಕುಣಿದಿದ್ದು, ಒಮ್ಮೆ ನಮ್ಮಲ್ಲಿ ನಡೆದ 'ಭಾರತ್ ಸ್ಕೌಟ್ಸ್' ಸಂವಾದದ ನಂತರ ಗುರುಗಳನ್ನೆಲ್ಲ ನೆನಪಿಸಿಕೊಂಡು ಖುಷಿಪಟ್ಟಿದ್ದು ಎಲ್ಲ ನೆನಪಾಯ್ತು.

—ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ಖುಷಿ ಕೊಟ್ಟ ಸಂಚಿಕೆ

ಆಗಸ್ಟ್ 15ರ ಸಂಚಿಕೆಯಲ್ಲಿ ಪ್ರಕಟವಾದ ಚಿಂತಾಮಣಿ ಕೊಡ್ಲೆಕೆರೆ ಅವರ ಎರಡು ಕಥೆಗಳು ಗಮನ ಸೆಳೆದವು. 'ನಿಮ್ಮೊಡನೆ' ಪುಟದಲ್ಲಿ ರಘುನಾಥ ಚ. ಹ. ಬರೆದ ನಕಲಿ ಡಾಕ್ಟರ್‌ಗಳ ಕುರಿತ ಲೇಖನವೂ ಸಕಾಲಿಕವಾಗಿದೆ. ಪ್ರತಿಬಾರಿ ಕಿರುಚಿತ್ರ ಪರಿಚಯ ಮತ್ತು ವಿಮರ್ಶೆಯನ್ನು ಪ್ರಕಟಿಸುತ್ತಿರುವುದು ಸಂತೋಷದ ವಿಷಯ.

—ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ

## ಚಡಗ ಪ್ರಶಸ್ತಿಗೆ ಆಹ್ವಾನ

ಉಡುಪಿಯ ಕೋಟೇಶ್ವರದ ಎಸ್‌ಆರ್‌ಎಂಎಚ್ ಪ್ರಕಾಶನ, 'ಚಡಗ ಸ್ಮಾರಕ ಪ್ರಶಸ್ತಿಗೆ' 2018ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಕಾದಂಬರಿಗಳನ್ನು ಆಹ್ವಾನಿಸಲಾಗಿದೆ.

ಕಾದಂಬರಿ ಕನಿಷ್ಠ ನೂರರಿಂದ ನೂರೈವತ್ತು ಪುಟಗಳು ಇರಬೇಕು. ಲೇಖಕರ ಸ್ವಂತ ರಚನೆಯಾಗಿರಬೇಕು. ಪ್ರಶಸ್ತಿಯು ₹10,000 ನಗದು, ಪ್ರಶಸ್ತಿ ಫಲಕ, ಸ್ಮರಣಿಕೆಗಳನ್ನೊಳಗೊಂಡಿರುತ್ತದೆ. ಲೇಖಕರು ಅಥವಾ ಪ್ರಕಾಶಕರು ಪ್ರಕಟಿತ ಪುಸ್ತಕಗಳ ನಾಲ್ಕು ಪ್ರತಿಗಳನ್ನು ಸೆಪ್ಟೆಂಬರ್ ಎರಡನೇ ವಾರದೊಳಗೆ ತಲುಪಿಸಬೇಕು. ವಿಳಾಸ: ಕೆ. ಶಾರದಾಭಟ್, ನಂ.58, ಶಾಂತಾನಂದ ರೆಸಿಡೆನ್ಸಿ, ಮಿಶನ್ ಆಸ್ಪತ್ರೆ ರಸ್ತೆ, ಉಡುಪಿ 576101, ದೂರವಾಣಿ : 08202535462.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in